X-Ray facilities at Chittapur Civil Dispensary

275. SRI PRABHAKAR TELKAR (Chittapur),—Will the Minister for Health and Family Welfare be pleased to state.—

(a) whether the Government is aware that there is no X-Ray facilities at Chittapur Civil Dispensary in Gulbarga District ;

(b) whether the Government is providing the X-Ray plant to Chittapur Civil Hospital ?

SRI A.K. ABDUL SAMAD (Minister for Health and Family Welfare)

(a) Yes

(b) Supply of new X-Ray Unit will be considered at the time of up-grading the present Dispensary (Primary Health Unit) subject to availability of funds.

SRI PRABHAKAR TELKAR.—In Chitapur Taluk there is a population of about 2 lakhs. As per your reply there are no facilities of X-Ray at Chitapur Dispensary though it is a Taluk hospital. It is also the policy of the Government that every Taluk headquarter's hospital must have this X-Ray facility. What is the reason for not providing such X-Ray facility to Chitapur Taluk hospital?

SRI A.K. ABDUL SAMAD.—It is also the policy of the Government to upgrade all the Taluk level health units to a 50 bedded hospital with X-Ray facilities subject to the availability of funds. We are considering to provide X-Ray to your hospital.

SRI PRABHAKAR TELKAR.—My question is that when all other Taluk hospitals are having such facilities, why only Chitapur hospital is not having it, My request is that at least there should be an assurance to provide it at the earliest. Every time people from Chitapur will have to go to Gulbarga and other places to get X-Ray facility. Will the Government assure that it will be provided in the near future?

SRI A.K. ABDUL SAMAD,—We will provide X-Ray facilities to Chitapur hospital.

SRI QUMARUL ISLAM.—In Chitapur there are so many factories, ncluding cement factory. Therefore, I request the Government to give top priority in giving this facility to that hospital.

SRI A.K. ABDUL SAMAD,—We will bear it in mind,

ಶ್ರೀ ಶೇರ್‌ಖಾನ್.—ಸ್ವಾಮಿ, ಚಿತ್ತಾಪುರದ ಒಂದು ಎಕ್ಸರೇ ಯೂನಿಟ್ ಕೊಡುವುದಕ್ಕೆ ಪ್ರಿಯಾರಿಟಿ ಕೊಡುತ್ತೇವೆಂದು ಹೇಳುತ್ತಿದ್ದೀರಿ ಅದು ಕರೆಕ್ಟ್. ಆದರೆ ಅಲ್ಲಿ ಮಿಷನ್ ನಡೆಸುವುದಕ್ಕೆ ಟೆಕ್ನೀಶಿಯನ್ಸ್ ಇಲ್ಲ. ಒಂದು ಜಾಗದಲ್ಲಿ ಎಕ್ಸ್‌ರೇ ಯೂನಿಟ್ ಇದ್ದರೆ ಆಪರೇಟರ್ಸ್ ಇಲ್ಲ, ಆಪರೇಟರ್ಸ್ ಇದ್ದರೆ ಯೂನಿಟ್ ಇಲ್ಲ. ಹೀಗಾಗಿದೆ ಈಗಿನ ಪರಿಸ್ಥಿತಿ. ಮತ್ತೆ ಎರಡೂ ಇದ್ದರೆ ಫಿಲಂ ಇಲ್ಲ ಅಂತ ಹೇಳಂ

ತ್ತಾರೆ. ಇದರಿಂದ ಆಲ್ಲಿನ ಜನಗಳಿಗೆ ಬಹಳ ತ್ರಾಸವಾಗಿದೆ. ಇದರ ಬಗ್ಗೆ ನಮ್ಮ ಏರಿಯಾದಲ್ಲಿ ಬಹಳಷ್ಟು ದೂರುಗಳಿವೆ. ಆದುದರಿಂದ ಇದನ್ನು ಬಗೆಹರಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಟೆಕ್ನೀಶಿಯನ್ಸ್‌ಗೆ ಟ್ರೈನಿಂಗ್ ಕೊಡಬೇಕಾಗುತ್ತದೆ. ಈ ಟ್ರೈನಿಂಗ್ ಪೀರಿಯಡ್ ಈ ಮಾರ್ಚಿ ಅಥವಾ ಏಪ್ರಿಲ್‌ಗೆ ಮುಗಿಯುತ್ತದೆ. ಆಗ ೧೮ ಜನರನ್ನು ಪೋಸ್ಟ್ ಮಾಡುತ್ತೇವೆ.

ಶ್ರೀ ಪ್ರಭಾಕರ್ ತೇಲ್ಕರ್.—ಚಿತ್ತಾಪುರ ತಾಲ್ಲೂಕಿನಲ್ಲಿ ವೀಡಿಯಾ ಸಿಮೆಂಟ್ ಫ್ಯಾಕ್ಟರಿ ಬರುತ್ತದೆ ಮತ್ತು ಶಹಬಾದ್ ಸಿಮೆಂಟ್ ಫ್ಯಾಕ್ಟರಿ ಬೇರೆ ಇದೆ, ಇನ್ನು ಬೇರೆ ಬೇರೆ ಫ್ಯಾಕ್ಟರಿಗಳು ಇದೆ. ಆಲ್ಲಿ ಒಂದು ಎಕ್ಸರೇ ಯೂನಿಟ್ ಇಲ್ಲದೇ ಇರುವುದರಿಂದ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥ ನೌಕರರುಗಳು ಕೈ ಕಾಲು ಮುರಿದುಕೊಂಡಿದ್ದರೂ ಸಹ ಅವರಿಗೆ ಸರಿಯಾದ ಮಾಹಿತಿ ಸಿಗದೇ ಇರುವುದರಿಂದ ಬಹಳ ತೊಂದರೆ ಪಡುತ್ತಿದ್ದಾರೆ. ಆದುದರಿಂದ ಇದನ್ನು ಆದಷ್ಟು ಬೇಗ ತೀವ್ರವಾಗಿ ಪರಿಶೀಲನೆ ಮಾಡಿ ಈ ವರ್ಷವೇ ಆಲ್ಲಿಗೇ ಎಕ್ಸರೇ ಸೌಲಭ್ಯವನ್ನು ಒದಗಿಸಿಕೊಟ್ಟರೆ ಉತ್ತಮವೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೆ. ಅಬ್ದುಲ್ ಸಮದ್.—We will consider this.

MR. SPEAKER.—Questions are over

Lathi charge at Bagalkote

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಅಧ್ಯಕ್ಷರೇ, ಬಾಗಲ್‌ಕೋಟೆಯಲ್ಲಿ ಭಾನುವಾರ ಸಂಜೆ ವಿದ್ಯಾರ್ಥಿಗಳ ಮೇಲೆ ಗೋಲಿಬಾರ್ ಮಾಡಿದ್ದಾರೆ. ಅಲ್ಲಿ ಒಂದು ವಾರಗಳ ಕಾಲ ಕರ್‌ಫ್ಯೂ ವಿಧಿಸಿದ್ದಾರೆ. ಇದರಿಂದ ಆಲ್ಲಿಯ ಜನರು ಭಯಭೀತರಾಗಿದ್ದಾರೆ. ಇದರಲ್ಲಿ ಹುಡುಗರ ಜವಾಬ್ದಾರಿ ಇದೆಯೇ ಅಥವಾ ಇನ್ನು ಯಾರದು ಇದೆ ಎಂಬುದರ ಬಗ್ಗೆ ತನಿಖೆಯಾಗಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ವಿನಂತಿ ಮಾಡಿಕೆ ಳ್ಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳವರು ಸಮಯೋಜಿತವಾದ ಉತ್ತರ ಕೊಡುತ್ತಾರೆ ದಯವಿಟ್ಟು ಕುಳಿತುಕೊಳ್ಳಿ.

SRI B. B. SAYANAK —I too have given notice of the same incident. In Bagalkot lathi charge has taken place and many people have been injured. The Hon. Chief Minister is here and he can give reply.

MR. SPEAKER.—We have received the notice just today. We will send it to Government and the Chief Minister will make a statement tomorrow.

Inadequate Supply of Milk by the Bangalore Dairy

ಶ್ರೀ ಎ. ಲಕ್ಷ್ಮೀಸಾಗರ್.—ಬೆಂಗಳೂರಿನ ಹಾಲಿನ ಡೈರಿಯಿಂದ ಹಾಲಿನ ಪೂರೈಕೆ ಪೂರ್ಣವಾಗಿ ಬೆಂಗಳೂರು ನಗರದಲ್ಲಿ ಆಗುತ್ತಿಲ್ಲ. ಮೊನ್ನೆ ಅಂದರೆ ೧೦ನೇ ತಾರೀಖು ಸುಮಾರು ಶೇಕಡ ೫೦ರಷ್ಟು ಆಗಿದೆ. ಅದೂ ಕೂಡ ಬಹಳ ತಡವಾಗಿ ಸರಬರಾಜು ಮಾಡಿದ್ದಾರೆ. ೧೧ ರಂದು ಕೂಡ ತಡವಾಗಿ ಶೇಕಡ ೫೦ ರಷ್ಟು ಆಗಿದೆ. ೧೨ ರಂದು ಸಹ ಶೇಕಡ ೪೦ರಷ್ಟು ಹಾಲನ್ನು ಅದೂ ತಡವಾಗಿ ಪೂರೈಕೆ ಮಾಡಿದ್ದಾರೆ. ರಾಜಾಜಿನಗರದ ಕೆಲವು ಕಡೆ ಪೂರ್ತಿಯಾಗಿ ಹಾಲಿನ ಸರಬರಾಜು ಆಗಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಹಳ್ಳಿಗಳಿಂದ ಹಾಲು ತರತಕ್ಕವರಿಂದ ಹಾಲನ್ನು ತೆಗೆದು ಕೊಳ್ಳಬಾರದೆಂಬ ಕೆಲವು ನಿರ್ಬಂಧಗಳು ಇವೆ. ಹೀಗಾಗಿ ನಾಗರೀಕರಿಗೆ ತುಂಬ ತೊಂದರೆಯಾಗಿದೆ. ಆದ್ದರಿಂದ, ಸರ್ಕಾರದವರು ಇದರ ಬಗ್ಗೆ ಸರಿಯಾಗಿ ಕ್ರಮ ತೆಗೆದುಕೊಂಡು ಹಾಲಿನ ಪೂರೈಕೆ ಮಾಡಬೇಕು.